

ಶ್ರೀವಾಣಿ

ಹಾ. ಮಾ. ನಾಯಕ, ಸಂಪಾದಕ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು-೧೯

ಬಿ. ಎಂ. ಶ್ರೀ. ಜನ್ಮಶತಮಾನೋತ್ಸವ ಪ್ರಕಟನ ಮಾಲೆ

1. ಶ್ರೀವಾಣಿ (ಸೂಕ್ತಿಗಳ ಸಂಗ್ರಹ)
2. ಆಚಾರ್ಯ ಬಿ. ಎಂ. ಶ್ರೀ. (ಜೀವನ ಪರಿಚಯ)
3. ಕನ್ನಡದ ಕಣ್ವ ಬಿ. ಎಂ. ಶ್ರೀ. (ಮಕ್ಕಳಿಗೆ)
4. ಶ್ರೀನಿಧಿ (ಸಂಸ್ಮರಣ ಸಂಪುಟ)
5. ಶ್ರೀಗಂಧ (ಸ್ಮರಣ ಸಂಚಿಕೆ)
6. ಗದಾಯುದ್ಧ ನಾಟಕಂ (ಸರಳ ನಾಟಕಾನುವಾದ)
7. ಅಶ್ವತ್ಥಾಮನ್ (ಸರಳ ನಾಟಕಾನುವಾದ)
8. ಪಾರಸಿಕರು (ಸರಳ ನಾಟಕಾನುವಾದ)
9. ಶ್ರೀನಾಟಕ ಕಥೆಗಳು (ಮಕ್ಕಳಿಗೆ)
10. ಶ್ರೀಯವರ ವಿವಿಧ ಆಕಾರದ ವರ್ಣಚಿತ್ರಗಳು
11. ಶ್ರೀಯವರ ಸ್ವತಂತ್ರ ಕವಿತೆಗಳು
12. B. M. S.—The Man and His Mission (Commemorative Volume)

ಬಿ. ಎಂ. ಶ್ರೀ. ಜನ್ಮಶತಾಬ್ದಿ ಕೃತಿಮಾಲೆ–೨

ಶ್ರೀವಾಣಿ

ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರ
ಕೃತಿಗಳಿಂದ ಆಯ್ದ ಸೂಕ್ತಿಗಳು

ಹಾ. ಮಾ. ನಾಯಕ, ಸಂಪಾದಕ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ
ಬೆಂಗಳೂರು - ೧೯

SRIVANI, a collection of sayings selected from the works of Professor B. M. Srikantaiah (1884-1946); Edited by Dr. H. M. Nayak ; Published by B. M. Sri. Memorial Foundation, Bangalore-560 019.
First Edition 1984 ; pp. 24

ಬೆಲೆ : ಒಂದು ರೂಪಾಯಿ

ಮುದ್ರಕರು : ಶ್ರೀ ಮೀರಾ ಪ್ರಿಂಟರ್ಸ್, ಶಿವರಾಂಪೇಟೆ, ಮೈಸೂರು.

ಮೊದಲ ಮಾತು

"ಶ್ರೀಯವರದು ಒಂದು ವಾಣಿ—A voice".

—ಇದು ಕನ್ನಡ ನವೋದಯದ ಆಚಾರ್ಯರಾದ ಬಿ. ಎಂ. ಶ್ರೀಕಂಠಯ್ಯನವರನ್ನು ಕುರಿತು ವಿ.ಸೀ. ಹೇಳಿದ ಒಂದು ಮಾತು. ಈ ಚಿಕ್ಕ ಪುಸ್ತಿಕೆಯಲ್ಲಿ ಆ ವಾಣಿಯನ್ನು ಸಂಗ್ರಹಿಸುವ ಪ್ರಯತ್ನ ಮಾಡಿದೆ.

ಶ್ರೀ ಶತಮಾನೋತ್ಸವ ವರ್ಷದಲ್ಲಿ (೧೯೮೪) ಅವರ ಸಾಹಿತ್ಯವನ್ನೂ, ವಿಚಾರ ಧಾರೆಯನ್ನೂ ನಮ್ಮ ಜನರಿಗೆ ಚೆನ್ನಾಗಿ ಪರಿಚಯ ಮಾಡಿಕೊಡುವ ದೃಷ್ಟಿಯಿಂದ ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ಅನೇಕ ಯೋಜನೆಗಳನ್ನು ಹಾಕಿಕೊಂಡಿದೆ. ಪ್ರಸ್ತುತ 'ಶ್ರೀವಾಣಿ'ಯ ಪ್ರಕಟಣೆ ಅವುಗಳಲ್ಲಿ ಒಂದು. ಇದರಲ್ಲಿ ಶ್ರೀಕಂಠಯ್ಯನವರ ಕೃತಿಗಳಿಂದ ಆಯ್ದ ೧೩೨ ಸೂಕ್ತಿಗಳನ್ನು ಸಂಕಲಿಸಲಾಗಿದೆ. ಈ ಕೆಲಸಕ್ಕೆ 'ಶ್ರೀಸಾಹಿತ್ಯ'ವನ್ನು ಆಧರಿಸಿದೆ.

'ಇಂಗ್ಲಿಷ್ ಗೀತಗಳು', 'ಅಶ್ವತ್ಥಾಮನ್' ಮತ್ತು 'ಪಾರಸಿಕರು' ಗ್ರಂಥಗಳಿಂದಲೂ ಆಯ್ದ ಸೂಕ್ತಿಗಳನ್ನು ಇಲ್ಲಿ ಸೇರಿಸಿರುವುದಕ್ಕೆ ಕೆಲವ ರಾದರೂ ಆಕ್ಷೇಪಿಸಬಹುದೇನೊ. ಈ ಕೃತಿಗಳು ಭಾಷಾಂತರಗಳೊ, ಸೃಷ್ಟ್ಯಂತರಗಳೊ ಆಗಿರುವುದು ನಿಜ. ಆದರೆ ಅವು ಈಗ ಕನ್ನಡದ ಭಾಗಗಳೇ ಆಗಿ ಹೋಗಿವೆ. "ಕರುಣಾಳು ಬಾ ಬೆಳಕೆ ಮುಸುಕಿದೀ ಮಬ್ಬಿನಲಿ ಕೈ ಹಿಡಿದು ನಡಸೆನ್ನನು" ಎಂಬ ಮಾತುಗಳು ಶ್ರೀಯವರವೆಂದೇ ನಮ್ಮ ಜನರಿಗೆ ಗೊತ್ತು ; ಅವುಗಳ ಮೂಲ ನ್ಯೂಮನ್ನನದೆಂದು ತಿಳಿದವರು ತೀರ ವಿರಳ. ಬಹುಪಾಲು ಜನರಿಗೆ ಈ ಮೂಲಗಳನ್ನು ತಿಳಿದು, ನೋಡಿ, ಓದಿ ಸಂತೋಷಿಸುವ ಅವಕಾಶಗಳಿಲ್ಲ. ಅಲ್ಲದೆ ಶ್ರೀಯವರೇ ಹೇಳಿದ್ದಾರಲ್ಲ : "ಜೇನು ಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲಾ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿಹೋದರೆ, ಆಗ ಹೊರಗಿನದು ಎಲ್ಲಿ ಬಂತು ?"

ಮೊದಲ ಹಾಗೂ ಕೊನೆಯುವನ್ನು ಬಿಟ್ಟು ಮಿಕ್ಕ ಸೂಕ್ತಿಗಳನ್ನು ಅಕಾರಾದಿಯಾಗಿ ಜೋಡಿಸಿದೆ. ಹಳಗನ್ನಡದಲ್ಲಿರುವ ಸೂಕ್ತಿಗಳ ಜೊತೆಗೆ ಅವುಗಳ ಹೊಸಗನ್ನಡ ರೂಪವನ್ನೂ ಕೊಡಬೇಕೆಂಬ ಯೋಚನೆ ಇತ್ತು. ಪುಸ್ತಿಕೆಯ ಗಾತ್ರ ಹೆಚ್ಚುವುದೆಂಬ ಕಾರಣದಿಂದ ಅದನ್ನು ಕೈಬಿಡಲಾಯಿತು. ಹಳಗನ್ನಡಕ್ಕಾಗಿ ಓದುಗರೂ ಸ್ವಲ್ಪ ಶ್ರಮಪಡುವುದು ಸೂಕ್ತವೆಂದು ತೋರುತ್ತದೆ. ತಮ್ಮ 'ಪ್ರಿಯವಾಚಕ'ರಿಗೆ ಶ್ರೀಯವರೇ ಹೇಳಿದ್ದಾರೆ— "ಹಳಗನ್ನಡಕ್ಕೆ ಹೆದರಬೇಡಿ. ಕೊಂಚ ಅಭ್ಯಾಸವಾದರೆ ದೊಡ್ಡ ಬೊಕ್ಕಸಕ್ಕೆ ನಿಮಗೆ ಬೀಗದಕೈ ಅದು."

ಶ್ರೀ ಶತಮಾನೋತ್ಸವ ಸಮಿತಿಯ ಕಾರ್ಯಾಧ್ಯಕ್ಷ ಶ್ರೀ ಜಿ. ನಾರಾಯಣ ಮತ್ತು ಶ್ರೀ ಸ್ಮಾರಕ ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿ ಶ್ರೀ ಎಂ. ವಿ. ಸೀತಾರಾಮಯ್ಯ ಈ ಸೂಕ್ತಿ ಸಂಕಲನವನ್ನು ಸಿದ್ಧಪಡಿಸುವ ಜವಾಬ್ದಾರಿಯನ್ನು ನನಗೆ ವಹಿಸಿದರು. ಅವರಿಬ್ಬರಿಗೂ ನಾನು ಕೃತಜ್ಞನಾಗಿದ್ದೇನೆ. ಶ್ರೀ ಸಾಹಿತ್ಯವನ್ನು ನನಗಿಂತ ಚೆನ್ನಾಗಿ ಬಲ್ಲವರು ಯಾರಾದರೂ ಮಾಡಿದ್ದಿದ್ದರೆ ಈ ಕೆಲಸ ಹೆಚ್ಚು ಸಮರ್ಪಕವಾಗಿರುತ್ತಿತ್ತೇನೊ. ಒಂದು ವಾರದ ಅವಧಿಯಲ್ಲಿಯೇ ಈ ಪುಸ್ತಿಕೆ ಸಿದ್ಧವಾಗಬೇಕಾಯಿತು. ಅದರ ಫಲವಾದ ಕೊರೆಗಳನ್ನು ಓದುಗರು ಮನ್ನಿಸಬೇಕು. ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ 'ಶ್ರೀಸಾಹಿತ್ಯ'ಕ್ಕೆ ನಾನು ಬರೆದ ಮುನ್ನುಡಿಯ ಕೆಲವು ಭಾಗಗಳನ್ನು ಸಂಗ್ರಹಿಸಿ ಈ ಪುಸ್ತಿಕೆಯಲ್ಲಿ ಸೇರಿಸಬೇಕೆಂದು ಶ್ರೀ ಜಿ. ನಾರಾಯಣ ಒತ್ತಾಯಿಸಿದರು. 'ಶ್ರೀ ಸ್ತವನ' ಎಂಬ ಪೀಠಿಕಾ ಲೇಖನ ಈ ಒತ್ತಾಯದ ಫಲ.

'ಶ್ರೀ ಸಾಹಿತ್ಯ'ದ ಕೃತಿಸ್ವಾಮ್ಯ ಹೊಂದಿರುವ ಡಾ. ಎಸ್. ಜಿ. ಶ್ರೀಕಂಠಯ್ಯನವರು ಈ ಸಂಕಲನ ಪ್ರಕಟಿಸಲು ಅನುಮತಿ ಕೊಟ್ಟಿದ್ದಾರೆ; ಡಾ. ಟಿ. ವಿ. ವೆಂಕಟಾಚಲ ಶಾಸ್ತ್ರಿಯವರು ಕೆಲವು ಉಪಯುಕ್ತ ಸಲಹೆಗಳನ್ನು ನೀಡಿದ್ದಾರೆ ; ಶ್ರೀ ಮಾರಾ ಪ್ರಿಂಟರ್ಸ್‌ನ ಶ್ರೀ ಪುಟ್ಟಸ್ವಾಮಿ ಅತಿಶೀಘ್ರವಾಗಿ ಅಚ್ಚಿಟ್ಟಿದ್ದಾರೆ. ಇವರೆಲ್ಲರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಈ ಕಿರುಪುಸ್ತಕದ ಪ್ರಕಟಣೆಯ ಮೂಲಕ ನಾನು ಶ್ರೀ ಅವರಿಗೆ ಶತವರ್ಷೋತ್ಸವ ವರ್ಷದ ನೆನಪಿನ ಕಾಣಿಕೆ ಸಲ್ಲಿಸುತ್ತಿದ್ದೇನೆ. ಶ್ರೀಯವರನ್ನು ನಾನು ಕಂಡವನಲ್ಲ ; ಅವರ ವಾಣಿಯನ್ನು ಕೇಳಿದವನಲ್ಲ. ಅವರು ತೀರಿಕೊಂಡಾಗ ಮಲೆನಾಡಿನ ಮೂಲೆಯ ಹಳ್ಳಿಯೊಂದರಲ್ಲಿ ನಾನಿನ್ನೂ ಮಾಧ್ಯಮಿಕ ಶಾಲೆಯ ಕಿರಿಯ ವಿದ್ಯಾರ್ಥಿಯಾಗಿದ್ದೆ. ಆದರೇನು ? ಅವರು ನನ್ನ, ನನ್ನಂಥ ಎಷ್ಟೋ ಜನರ, ಕಣ್ಣು ಕಿವಿ ಮನಸ್ಸುಗಳನ್ನು ತುಂಬಿಕೊಂಡಿದ್ದಾರೆ ; ಆಲೋಚನೆಯ ಭಾಗವಾಗಿಹೋಗಿದ್ದಾರೆ. ಇದೇ ನಿಜವಾದ ಆಚಾರ್ಯರ ಸಾಧನೆ ; ಕಾರಣಪುರುಷರ ಕೆಲಸ.

'ಶ್ರೀವಾಣಿ' ಸದಾ ನಮ್ಮನ್ನು ಎಚ್ಚರಿಸುತ್ತಿರಲಿ ; ಒಳ್ಳೆಯ ದಾರಿಯಲ್ಲಿ ನಡೆಸುತ್ತಿರಲಿ.

ಹಾ. ಮಾ. ನಾಯಕ

'ಗೋಧೂಳಿ', ಜಯಲಕ್ಷ್ಮೀಪುರಂ
ಮೈಸೂರು ೫೭೦ ೦೧೨
ಜನವರಿ ೩, ೧೯೮೪

ಉಪಕಾರ ಸ್ಮರಣೆ

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನ ೧೯೮೪ನೆಯ ವರ್ಷದುದ್ದಕ್ಕೂ ಬಿ. ಎಂ. ಶ್ರೀ. ಜನ್ಮಶತಮಾನೋತ್ಸವವನ್ನು ವೈವಿಧ್ಯಪೂರ್ಣವಾಗಿ ಆಚರಿಸಲು ನಿರ್ಧರಿಸಿತು. ಅದರ ಅಂಗವಾಗಿ ಬಿ. ಎಂ. ಶ್ರೀ. ಯವರ ವ್ಯಕ್ತಿತ್ವ, ಕೃತಿಗಳು ಮತ್ತು ಸಾಧನೆಗಳನ್ನು ಕುರಿತು ಕೆಲವು ಪುಸ್ತಕಗಳನ್ನು ಪ್ರಸಿದ್ಧ ವಿದ್ವಾಂಸರಿಂದ ಬರೆಯಿಸಿ ಪ್ರಕಟಿಸಬೇಕೆಂದು ಉತ್ಸವ ಸಮಿತಿ ನಿರ್ಧರಿಸಿತು. ಪುಸ್ತಕ ಪ್ರಕಟನೆಗಳ ಕಾರ್ಯವನ್ನು ನೋಡಿಕೊಳ್ಳಲು ಒಂದು ಪ್ರಕಟನ ಸಮಿತಿಯನ್ನು ನಿಯೋಜಿಸಲಾಯಿತು. ಖ್ಯಾತ ಹಿರಿಯ ಸಾಹಿತಿಗಳಾದ ಡಾ. ರಂ. ಶ್ರೀ. ಮುಗಳಿ ಅದರ ಅಧ್ಯಕ್ಷರಾಗಿದ್ದುಕೊಂಡು ದೊಡ್ಡ ಉಪಕಾರ ಮಾಡಿದ್ದಾರೆ. ಬರೆದು ಬಂದ ಹಸ್ತಪ್ರತಿಗಳನ್ನು ಪರಿಶೀಲಿಸಿ ಉಪಯುಕ್ತ ಸಲಹೆ ಸೂಚನೆಗಳನ್ನು ನೀಡಿದ್ದಾರೆ. ಅವರಿಗೆ ಪ್ರತಿಷ್ಠಾನ ಅತ್ಯಂತ ಋಣಿಯಾಗಿದೆ.

ಪುಸ್ತಕಗಳ ಪ್ರಕಟನ ಕಾರ್ಯದಲ್ಲಿ ಉತ್ಸವ ಸಮಿತಿಯ ಕಾರ್ಯಾಧ್ಯಕ್ಷರಾದ ಶ್ರೀ ಜಿ. ನಾರಾಯಣ ಅವರ ಅನುಭವಪೂರ್ಣ ಮಾರ್ಗದರ್ಶನದಿಂದ ಪ್ರತಿಷ್ಠಾನ ತುಂಬ ಉಪಕೃತವಾಗಿದೆ.

ಕನ್ನಡ ನಾಡಿನ ನವೋದಯದ ಶಿಲ್ಪಿ ಆಚಾರ್ಯ ಬಿ. ಎಂ. ಶ್ರೀ. ಅವರ ಬರಹಗಳನ್ನು ಆಲೋಕಿಸುವವರಿಗೆ—ಕನ್ನಡ ನಾಡು-ನುಡಿಯೊಲವನ್ನು ಓದುಗರಲ್ಲಿ ಬಿತ್ತುವ, ಕನ್ನಡದ ನೂರ್ಕಾಲದ ಮುನ್ನಡೆಗೆ ದಾರಿದೀಪವಾಗಬಲ್ಲ, ನಿತ್ಯ ಸತ್ಯಗಳನ್ನು ಸಾರುವ, ಅವೆಷ್ಟೋ ವಾಕ್ಯಮಾಣಿಕ್ಯಗಳು ಕಣ್ಣಿಗೆ ಬೀಳದಿರವು. ಅವುಗಳಲ್ಲಿ ಎಂದಿಗೂ ಸಲ್ಲುವಂಥವು ಹಲವು ಕೆಲವನ್ನು ಆಯ್ದು ಕೊಡುಕೊಡಬೇಕೆಂದು ಡಾ. ಹಾ. ಮಾ. ನಾಯಕರನ್ನು ಕೇಳಿಕೊಂಡೆವು. ಮಾನಸಗಂಗೋತ್ರಿಯ ಕನ್ನಡ ಅಧ್ಯಯನ ಸಂಸ್ಥೆಯ ವತಿಯಿಂದ ಈಗಾಗಲೇ ಸಮಗ್ರ 'ಶ್ರೀ ಸಾಹಿತ್ಯ'ವನ್ನು ಹೊರತಂದು ಕನ್ನಡಿಗರ, ಅದರಲ್ಲೂ 'ಶ್ರೀ' ಅಭಿಮಾನಿಗಳ ಕೃತಜ್ಞತೆಗೆ ಪಾತ್ರರಾದ ಅವರು ವಹಿಸಿದ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿಕೊಟ್ಟಿದ್ದಾರೆ. ಬೆಳ್ಳೂರಿನಲ್ಲಿ ನಡೆಯುವ ಉತ್ಸವದ ಉದ್ಘಾಟನಾ ಸಮಾರಂಭದಲ್ಲಿ ಬಿಡುಗಡೆಯಾಗಲಿರುವ ಪುಸ್ತಕಗಳ ಪೈಕಿ ಇದೂ ಒಂದು. ಪುಸ್ತಕ ಬಿಡುಗಡೆಯ ವೇಳೆಗೆ ಅಚ್ಚಾಗಿ ಸಿದ್ಧವಾಗಲು ಸಾಧ್ಯವಾಗುವಂತೆ ಅತ್ಯಲ್ಪ ಅವಧಿಯಲ್ಲಿ ಇದನ್ನು ಸಿದ್ಧಪಡಿಸಿಕೊಟ್ಟ ಸಂಪಾದಕ ಶ್ರೀ ಹಾ. ಮಾ. ನಾಯಕರಿಗೂ ಅಷ್ಟೇ ಬೇಗನೆ ಅಂದವಾಗಿ ಅಚ್ಚು ಮಾಡಿಕೊಟ್ಟ ಶ್ರೀ ಮಾರಾ ಪ್ರಿಂಟರ್ಸ್, ಮೈಸೂರು, ಅವರಿಗೂ ಪ್ರತಿಷ್ಠಾನದ ಕೃತಜ್ಞತೆಯ ವಂದನೆಗಳು ಸಲ್ಲುತ್ತವೆ.

ಬೆಂಗಳೂರು–೧೯
ಜನವರಿ ೩, ೧೯೮೪

ಎಂ. ವಿ. ಸೀತಾರಾಮಯ್ಯ
ಪ್ರತಿಷ್ಠಾನದ ಸಂಸ್ಥಾಪಕ ಕಾರ್ಯದರ್ಶಿ
ಮತ್ತು ಉಪಾಧ್ಯಕ್ಷ, ಉತ್ಸವ ಸಮಿತಿ

ಶ್ರೀಸ್ತವನ*

'ಶ್ರೀ' ಕಾವ್ಯನಾಮದ, ಬಿ. ಎಂ. ಶ್ರೀ. ಎಂಬ ಮೂರಕ್ಷರಗಳಿಂದ ಪ್ರಖ್ಯಾತರಾದ, ಪ್ರೊಫೆಸರ್ ಬಿ.ಎಂ. (ಬೆಳ್ಳೂರು ಮೈಲಾರಯ್ಯ) ಶ್ರೀಕಂಠಯ್ಯನವರು ಪ್ರಾತಃಸ್ಮರಣೀಯರಾದ ಕನ್ನಡಿಗರಲ್ಲಿ ಅಗ್ರಗಣ್ಯರು. 'ಕನ್ನಡದ ಕಣ್ವ'ರೆಂದು ಅವರ ಕೀರ್ತಿ. ಅವರು ನಮ್ಮ ಸಾಹಿತ್ಯಕ್ಕೆ ನವೋದಯವನ್ನು ತಂದ ಆಚಾರ್ಯರು ; ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡದ ಸ್ಥಾನವನ್ನು ಉನ್ನತವಾಗಿಸಿದ ಪ್ರಾಧ್ಯಾಪಕರು ; ನೂರಾರು ಹೊಸ ಲೇಖಕರಿಗೆ ಸ್ಫೂರ್ತಿಯನ್ನೂ, ಪ್ರೇರಣೆಯನ್ನೂ ಕೊಟ್ಟ ಮಾರ್ಗದರ್ಶಕರು ; ಒಂದು ಪರಂಪರೆಯ ನಿರ್ಮಾಪಕರು ; ಕನ್ನಡ ಕಾವ್ಯಕ್ಕೆ ಹೊಸಸಿಂಗಾರ ಮುಡಿಸಿದ, ಗದ್ಯಕ್ಕೆ ನವಶಕ್ತಿಯನ್ನು ತುಂಬಿದ ಕವಿಗಳು, ಲೇಖಕರು ; ವಿದ್ವತ್ತಿನಲ್ಲಿ ಜಲಚಿಹ್ನೆಯನ್ನು ಸ್ಥಾಪಿಸಿದವರು ; ಕಂಠಶ್ರೀಯಲ್ಲಿ ಅದ್ವಿತೀಯರು. ಯುಗ ಪ್ರವರ್ತಕ ಎಂಬ ಹೆಸರಿಗೆ ಮಾಡಿಸಿಟ್ಟ ವ್ಯಕ್ತಿ ಬಿ.ಎಂ. ಶ್ರೀಕಂಠಯ್ಯ. ಇಪ್ಪತ್ತನೇ ಶತಮಾನದ ಕನ್ನಡ ಸಾಹಿತ್ಯಕ್ಕೆ ಅವರು ಅಡಿಗಲ್ಲು, ಸ್ತಂಭ, ದೀಪ, ಕೈಮರ. ಇಂಥವರು ಎಲ್ಲ ಕಾಲಕ್ಕೂ ಬರುವುದಿಲ್ಲ. ಇಂಥವರಿಂದಲೇ ಒಂದು ಜನಾಂಗದ ಪ್ರಗತಿ, ಅಭ್ಯುದಯ.

ಕನ್ನಡವು ಕನ್ನಡಿಗರಿಂದಲೇ ತಿರಸ್ಕರಿಸಲ್ಪಡುತ್ತಿದ್ದ, ನಿರ್ಲಕ್ಷಿಸಲ್ಪಡುತ್ತಿದ್ದ ಕಾಲದಲ್ಲಿ ನಿಧಾನವಾಗಿ ಈ ಇಂಗ್ಲಿಷ್ ಪ್ರಾಧ್ಯಾಪಕರು ಕನ್ನಡದ ಕಡೆ ಬಂದರು, ನೋಡಿದರು, ಗೆದ್ದರು. ಅಮೂರ್ತಳಾದ ಕನ್ನಡ ತಾಯಿಗೆ ತಮ್ಮ ಭಾವ, ಭಾವನೆ, ಬರಹ, ಆವೇಶಗಳಿಂದ ರೂಪಕೊಡುವುದರಲ್ಲಿ ಸಫಲರಾದರು. ತಮ್ಮ ದಿನಗಳಲ್ಲಿ ಅವರೊಬ್ಬ ಕಿಂದರಿಜೋಗಿ. ನಾನಾ

---

*ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿರುವ 'ಶ್ರೀ ಸಾಹಿತ್ಯ' ಗ್ರಂಥಕ್ಕೆ ಬರೆದ ಮುನ್ನುಡಿಯಿಂದ ಹಾಗೂ ಮತ್ತೊಂದು ಲೇಖನದಿಂದ ಸಂಗ್ರಹಿಸಿದ್ದು.

ಕ್ಷೇತ್ರದ ಪ್ರತಿಭಾವಂತರನ್ನು ಅವರು ಕನ್ನಡದ ಕಡೆ ಆಕರ್ಷಿಸಿದರು; ಕನ್ನಡದ ದೀಕ್ಷೆ ಕೊಟ್ಟರು. ಸಾಹಿತಿಗಳನ್ನು ಸೃಷ್ಟಿಸಿದರು; ಸಾಹಿತಿಗಳ ಪಡೆಯನ್ನೇ ಸಜ್ಜುಗೊಳಿಸಿದರು. ಹೊಸಚಕ್ರದ ಕನ್ನಡದ ತೇರಿನ ಮಿಣಿಗೆ ಬಿ.ಎಂ. ಶ್ರೀಕಂಠಯ್ಯ ಕೈಹಾಕಿದರು ; ಎಳೆದರು ; ನಡೆಸಿದರು. ಅವರ ಆ ಸಾಹಸದಿಂದ ಈಗ ಕನ್ನಡದ ತೇರು ಮೆಲ್ಲಗಾದರೂ ಚಲಿಸುವಂತಾಗಿದೆ.

ಶ್ರೀಕಂಠಯ್ಯನವರು ಈಗ ಇಲ್ಲ (ಮರಣ : ಜನವರಿ ೫, ೧೯೪೬); ಇದ್ದಿದ್ದರೆ ಅವರಿಗೆ ಇಂದು ನೂರು ವರ್ಷ ಮುಗಿದು ನೂರೊಂದನೆಯ ವರ್ಷದಲ್ಲಿ ಕಾಲಿಡುತ್ತಿದ್ದರು (ಜನನ : ಜನವರಿ ३, ೧೮೮೪). ಭೌತಿಕವಾಗಿ ಅವರಿಲ್ಲ, ನಿಜ. ಆದರೆ ಅವರು ತಮ್ಮ ಕೃತಿಗಳಿಂದ, ನಾನಾ ಬಗೆಯ ಕೆಲಸಗಳಿಂದ, ಪರಂಪರೆಯ ನಿರ್ಮಾಣದಿಂದ ನಿತ್ಯರಾಗಿಹೋಗಿದ್ದಾರೆ. ಅವರನ್ನು ಸ್ಮರಿಸದೆ, ಅವರನ್ನು ಎಣಿಸದೆ ಈ ಶತಮಾನದ ಕನ್ನಡ ಸಾಹಿತ್ಯ ಚರಿತ್ರೆ, ಸಾಂಸ್ಕೃತಿಕ ಚರಿತ್ರೆ ಪೂರ್ಣಗೊಳ್ಳುವುದಿಲ್ಲ. ಚಳವಳಿ ಎಂಬ ಮಾತಿನ ಅರ್ಥ ಈಗ ಸವೆದಿದೆ, ಕೆಟ್ಟಿದೆ. ಆದರ ನಿಜವಾದ ಅರ್ಥದಲ್ಲಿ ಶ್ರೀಕಂಠಯ್ಯನವರು ಕನ್ನಡದ ಮೊದಲನೆಯ ಚಳವಳಿಗಾರರು ; ಕನ್ನಡ ಚಳವಳಿಯನ್ನು ಆರಂಭಿಸಿದವರೇ ಅವರು. ತಮ್ಮ ಕನ್ನಡದ ಕಾಯಕದಲ್ಲಿ ಅವರಿಗೆ ಸಾಕಷ್ಟು ಸೃಷ್ಟಿಕಾರ್ಯಗಳನ್ನು ಮಾಡುವುದು ಸಾಧ್ಯವಾಗಲಿಲ್ಲ. ಅವರು ಪ್ರತಿಭಾವಂತರು, ಪಂಡಿತರು, ಬಹುಭಾಷಾವಿದರು. ಅವರೇ ಮಾಡಬೇಕಾಗಿದ್ದ ಸಾಹಿತ್ಯಕ ಕೆಲಸಗಳು ಅನೇಕ ಇದ್ದವು ; ಪಾಂಡಿತ್ಯದ ಕೆಲಸಗಳು ಅನೇಕ ಇದ್ದವು ; ಆದಾನ ಪ್ರದಾನದ ಕೆಲಸಗಳೂ ಅನೇಕ ಇದ್ದವು ; ಶ್ರೀಕಂಠಯ್ಯನವರು ಮಾತಾಡಿದ್ದು ಹೆಚ್ಚು : ಬರೆದದ್ದು ಕಡಮೆ. ಮಾತಾಡಿದ್ದೆಲ್ಲ ಗಾಳಿಯಲ್ಲಿ ತೇಲಿಹೋಗಿದೆ ; ಬರೆದಷ್ಟು ಮಾತ್ರ ಚೊಕ್ಕ ಚಿನ್ನವಾಗಿ ಉಳಿದಿದೆ. ಅವರ ಕೃತಿಗಳನ್ನು ನೋಡಿದ ಯಾರಿಗಾದರೂ "ಅಯ್ಯೋ, ಇವರು ಇನ್ನೂ ಬರೆಯದೆ ಹೋದರಲ್ಲ" ಎನ್ನಿಸದೆ ಇರದು. ಇದೇ ಅವರ ಹಿರಿಮೆ ; ಇದೇ ನಮ್ಮ ದುರ್ದೈವ.

ಶ್ರೀಕಂಠಯ್ಯನವರ ಕೃತಿಗಳು ಹತ್ತು ; ಒಂದೊಂದೂ ಮುತ್ತು. 'ಇಂಗ್ಲಿಷ್ ಗೀತಗಳು' 'ಹೊಂಗನಸುಗಳು' ಕವನ ಸಂಗ್ರಹಗಳು ; 'ಗದಾಯುದ್ಧ ನಾಟಕಂ,' 'ಅಶ್ವತ್ಥಾಮನ್' ಮತ್ತು 'ಪಾರಸಿಕರು'

ನಾಟಕಗಳು ; ಅಪೂರ್ಣವಾದ 'ಕನ್ನಡ ಸಾಹಿತ್ಯದ ಚರಿತ್ರೆ', 'ಕನ್ನಡ ಛಂದಸ್ಸಿನ ಚರಿತ್ರೆ' ಸಂಶೋಧನೆಯ ಕೃತಿಗಳು ; 'ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ' ವಿಚಾರ, ವಿಮರ್ಶೆ, ಭಾಷಣ, ಮುನ್ನುಡಿಗಳ ಸಂಕಲನ ; 'ಇಸ್ಲಾಂ ಸಂಸ್ಕೃತಿ' ಅನುವಾದ ; *A Handbook of Rhetoric* ಇಂಗ್ಲಿಷಿನಲ್ಲಿ ಸಾಹಿತ್ಯ ಮೀಮಾಂಸೆಯ ಗ್ರಂಥ. ಈ ಹತ್ತು ಪುಸ್ತಕಗಳ ಗಾತ್ರ ದೊಡ್ಡದಲ್ಲ. ಎಲ್ಲವನ್ನೂ ಸೇರಿಸಿದರೆ ಕೇವಲ ಸುಮಾರು ೧೪೦೦ ಕಿರೀಟ ಆಕಾರದ ಪುಟಗಳು. ಇವುಗಳಲ್ಲಿ ಕೆಲವು ಪುಸ್ತಕಗಳು ಮತ್ತೆ ಮತ್ತೆ ಅಚ್ಚಾಗಿವೆ ; ಕೆಲವು ಸುಲಭವಾಗಿ ಸಿಕ್ಕುವುದಿಲ್ಲ ; ಇಂಗ್ಲಿಷ್ ಪುಸ್ತಕವನ್ನು ನೋಡಿದವರೇ ಕಡಮೆ.*

* * *

ಒಬ್ಬ ವ್ಯಕ್ತಿ, ಆತನ ಸಾಹಿತ್ಯ ಗಾತ್ರದಲ್ಲಿ ದೊಡ್ಡದಿರಲಿ, ಚಿಕ್ಕದಿರಲಿ, ಒಂದು ಭಾಷೆ ಸಾಹಿತ್ಯದ ಮೇಲೆ ಎಷ್ಟು ದೊಡ್ಡ ಪ್ರಭಾವವನ್ನು ಬೀರಬಹುದು ಎನ್ನುವುದಕ್ಕೆ, ಈ ೨೦ನೇ ಶತಮಾನದ ಕನ್ನಡ ಸಾಹಿತ್ಯದ ಮೇಲೆ ಶ್ರೀಕಂಠಯ್ಯನವರ ಪ್ರಭಾವ ಒಂದು ಅತ್ಯುತ್ತಮವಾದ ಉದಾಹರಣೆ.

* * *

ಕನ್ನಡದಲ್ಲಿ ಕೆಲಸಮಾಡುವ ಯಾರಿಗಾದರೂ ಬಿ.ಎಂ. ಶ್ರೀಕಂಠಯ್ಯನವರ ನೆನಪು ಬತ್ತದ ಕಾರಂಜಿ ; ಮುಗಿಯದ ಗಣಿ; ಸ್ಫೂರ್ತಿಯ ಸ್ರೋತ ; ಶಕ್ತಿಯ ಆಗರ.

ಋತವೊಂದೆ ಗೆಲ್ಲುವುದು, ಅನೃತವಲ್ತು ;
ಅಮೃತವನೆ ವಿದ್ಯೆಯಿಂ, ಅವಿದ್ಯೆಯಲ್ತು ;
ವಿಶ್ವಭಾರತಿ ಶರಣು, ಕಿರುತೀರ್ಥವಲ್ತು.

—ಇದು ಈ ಆಚಾರ್ಯರು ನಮ್ಮ ಜನರಿಗೆ ಬಿಟ್ಟು ಹೋಗಿರುವ

* ಈಚೆಗೆ (೧೯೮೩) 'ಶ್ರೀ ಸಾಹಿತ್ಯ' ಎಂಬ ಹೆಸರಿನಲ್ಲಿ ಶ್ರೀಯವರ ಸಮಗ್ರ ಕೃತಿಗಳ ಸಂಪುಟವನ್ನು ಕನ್ನಡ ಅಧ್ಯಯನ ಸಂಸ್ಥೆ ಪ್ರಕಟಿಸಿದೆ (ಡೆಮ್ಮಿ ಆಕಾರದ ೨೦ + ೮೭೨ ಪುಟಗಳು).

ಸಾವಿಲ್ಲದ ಸಂದೇಶ. ಈ ಸಂದೇಶದ ಬೆಳಕಿನಲ್ಲಿ ಕನ್ನಡಿಗರ, ಏಕೆ ? ಸಮಸ್ತರ, ಬದುಕು ಬೆಳೆಯಬೇಕು, ಬೆಳಗಬೇಕು.

ಕನ್ನಡದ ಸ್ಥಾನಮಾನಗಳು ಹಿಂದೆಂದಿಗಿಂತಲೂ ಚರ್ಚಾಸ್ಪದವಾಗಿರುವ, ಶೋಚನೀಯವಾಗಿರುವ ಇಂದಿನ ದಿನಗಳಲ್ಲಿ, ಆಚಾರ್ಯ ಶ್ರೀಕಂಠಯ್ಯನವರು ಅರ್ಧಶತಮಾನಕ್ಕೂ ಹಿಂದೆ ಕೂಗಿ ಕೂಗಿ ಹೇಳಿದ ಮಾತುಗಳು ನಮ್ಮನ್ನು ಎಚ್ಚರಿಸಬೇಕು ; ನಮ್ಮ ನಿರಭಿಮಾನವನ್ನು ಹೊಡೆದೋಡಿಸಬೇಕು :

"ಕನ್ನಡಿಗರೆ, ಏಳಿ, ಎಚ್ಚರಗೊಳ್ಳಿ, ಆರಂಬಮಾಡಿ. ಹಿಂದೆ ಯುರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ, ಒಬ್ಬ ಮಹಾ ಪಂಡಿತನು—'ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗುತ್ತೇವೆ' ಎಂದು ಘೋಷಿಸಿದನು. ನಾವು ಕನ್ನಡಿಗರು, ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ ; ಬದುಕಿರುವವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು."

ಈ ನಿರ್ಧಾರ, ಇದರ ನಿರ್ವಹಣೆ–ಇದರಲ್ಲಿಯೇ ಕನ್ನಡಿಗರ ಮೋಕ್ಷ.

'ಶ್ರೀ ಸಾಹಿತ್ಯ'–ಶ್ರೀಯವರ ನೆನಪನ್ನು ಉಕ್ಕಿಸುತ್ತಿರಲಿ : ಕನ್ನಡದ ಕೆಲಸಕ್ಕೆ ಸ್ಫೂರ್ತಿಯನ್ನು ಚಿಮ್ಮಿಸುತ್ತಿರಲಿ.

ಹಾ.ಮಾ. ನಾಯಕ

ಕನ್ನಡಿಗರೇ, ಏಳಿ, ಎಚ್ಚರಗೊಳ್ಳಿ, ಆರಂಭಮಾಡಿ.

*ಅಂಧಶ್ರದ್ಧೆಯನ್ನು ಬಿಟ್ಟು ಸತ್ಯವನ್ನು ಹುಡುಕೋಣ.

*ಅಂಧಶ್ರದ್ಧೆಯಿಂದ ಬಿಡುಗಡೆಯನ್ನೂ, ಒಂದು ದೊಡ್ಡ ಕೆಲಸಕ್ಕಾಗಿ ಒಕ್ಕಟ್ಟನ್ನೂ, ಧ್ಯೇಯ ಸಾಧನೆಯಿಂದ ಸೌಖ್ಯವನ್ನೂ ಪಡೆದು ಸ್ವತಂತ್ರ ಸಂಯುಕ್ತ ಸುಖಮಯ ಭಾರತದಲ್ಲಿ ಬಾಳೋಣ ಎಂಬುದೇ ನನ್ನ ಜೀವನದ ರಹಸ್ಯ ; ನನ್ನ ಕನ್ನಡ ಕೆಲಸದ ಗುಟ್ಟು ; ನನ್ನ ಮಿಡಿತ, ಕುದಿತ.

*ಅಲ್ಲದುದನಹುದೆಂದು, ಅಹುದನಲ್ಲೆಂದು, ಇಲ್ಲದುದನಿಹುದೆಂದು, ಇಹುದನಿಲ್ಲೆಂದು, ನಲ್ಲದಂ ಪೊಲೆಯೆಂದು, ಪೊಲೆ ನಲ್ಲದೆಂದು, ತಿರಿಸಿದರ್ ಮಾಯಾವಿಗಳ್ ಬಾಳ್ವ ಮಕ್ಕಳಂ ಸಾವ ಸಂಸಾರ ಸುತ್ತಿ.

*ಆಳ್‌ಸಿರಿಗೆ ಕಟುಂಬುವುದು ದೈವಂ.

*ಇಂದೇನೊ, ಮುಂದೇನೊ, ಮುನ್ನೆ ಅಳ್ ಕಾಣನ್. ಬಂದುದನೆ ಕೊಂಡುಂಡು ತಾಳ್ದವನೆ ಜಾಣನ್.

*ಇತರ ಭಾಷೆಗಳ ಸಂಪರ್ಕವೇ ಇಲ್ಲದೆ ಬರೆಯುತ್ತೇನೆ ಎನ್ನುವ ವೀರ ಪಂಥವೂ ಬೇಡ ; ಅವನ್ನೇ ಅತಿಯಾಗಿ ಬೆರಸಿ ಕನ್ನಡಭಾಷೆಯನ್ನು ಕೊಚ್ಚಿಸುವ ಪರಭಾಷಾ ವ್ಯಾಮೋಹವೂ ಬೇಡ.

*ಇದು ಸಣ್ಣದು; ಅದು ದೊಡ್ಡದು ಎಂಬ ಭಾವನೆ ನನಗೆ ಒಲ್ಲದು.

*ಇನಿತಾಯ್ತೆ, ಹಿಡಿಮಣ್ಣು, ಹಿಡಿಬೂದಿ, ಆಳ ಬಾಳು ? ಬಡವನೋ, ಬಲ್ಲಿದನೊ, ದೊರೆಯೊ, ಹಂಳುವೋ, ಇನಿತೆ ಈ ಬಾಳು ?

*ಇನ್ನೂ ನಮಗೆ ವ್ಯವಸಾಯ ಕಾಲವೇ ಹೊರತು ಫಲಬಿಡುವ ಕಾಲವಲ್ಲ.

*ಇವಳ ಸೊಬಗನವಳು ತೊಟ್ಟು,
ನೋಡ ಬಯಸಿದೆ ;
ಅವಳ ತೊಡಿಗೆ ಇವಳಿಗಿಟ್ಟು
ಹಾಡ ಬಯಸಿದೆ.

*ಈ ಪ್ರಪಂಚದಲ್ಲಿ ನಿರ್ದುಷ್ಟವಾದದ್ದು ಪರಿಪೂರ್ಣವಾದದ್ದು ಯಾವುದೂ ಇಲ್ಲ. ಎಲ್ಲದರಲ್ಲೂ ಒಂದು ಸತ್ವವಿದೆ, ಒಂದು ವೈಶಿಷ್ಟ್ಯವಿದೆ ; ಹಾಗೆಯೇ ಕೊರತೆಯಿದೆ, ಕಲ್ಮಷವಿದೆ.

*[ಉಪಾಧ್ಯಾಯರಲ್ಲಿ ವಿಜ್ಞಾಪನೆ] ಕನ್ನಡ ನಾಡಿನ ಚಿನ್ನದಂತಹ ಮಕ್ಕಳು ನಿಮ್ಮ ಕೈಯಲ್ಲಿವೆ. ತಾಯಿ ತಂದೆಗಳಂತೆ ಅಕ್ಕರೆಯಿಂದ ಸಂತೋಷದಲ್ಲಿ ಅವರನ್ನು ಬೆಳಸಿ. ಎಳೆಯ ಮನಸ್ಸಿನ ಮೇಲೆ ಹೆಚ್ಚು ಹೊರೆಯನ್ನು ಹೇರದೆ, ಆಟಪಾಟಗಳಿಂದ ನಲಿಸಿ, ಕಲಿಸಿ.

*ಉಳಿಯಲಾರದ್ದನ್ನು, ಉಳಿಯಬಾರದ್ದನ್ನು ತ್ಯಜಿಸುವ ಧೈರ್ಯ ನಮ್ಮಲ್ಲಿ ಬೆಳೆಯಬೇಕು.

*ಋತವೊಂದೆ ಗೆಲ್ಲುವುದು, ಅನೃತವಲ್ತು ;
ಅಮೃತಮೆನೆ ವಿದ್ಯೆಯೆ ; ಅವಿದ್ಯೆಯಲ್ತು ;
ವಿಶ್ವಭಾರತಿ ಶರಣು, ಕಿರು ತೀರ್ಥವಲ್ತು.

*ಎನ್ನ ಪಗೆಯಾದೊಡಂ,
ವಿಧಿವಶದೆ ಕಾಲ್‌ತೊಡರ್ದು ಬಿಟ್ದಂಗೆ
ಮಱುಗುವೆನ್.
ಇಂದವನ್, ನಾಳೆ ನಾನ್, ಏನ್ ಪಾಡೊ
ಆಳ ಬಾೞ !
ಬೀಸುವ ಬಯಲ್‌ಗಾಳಿ, ಪರಿದಡಂಗುವ
ನೆೞಲ್ !

*ಎಲ್ಲರೂ ಬಾಳುವೆಡೆ ನಮಗೆ ಸಾವೆ ?
ಎಲ್ಲರೂ ನಲಿವ ಕಡೆ ನಮಗೆ ನೋವೆ ?

*ಎಲ್ಲಿ ಪ್ರೇಮ ಅರ್ಹತೆಯನ್ನು ಕಾಣುತ್ತದೆಯೋ ಅಲ್ಲಿ ಅರ್ಹತೆಯಿಲ್ಲ ಎಂದು ಹೋರಾಡಿ ಫಲವಿಲ್ಲ, ಕಡೆಗೆ ಪ್ರೇಮವೇ ಗೆಲ್ಲುವುದರಿಂದ.

*ಏಕಭಾಷೆಯಿಲ್ಲದೆ ಏಕರಾಜ್ಯ [= ರಾಷ್ಟ್ರ] ವಿಲ್ಲ ಎನ್ನುವ ಮಾತು ಸುಳ್ಳು.

*ಏಗಳ್ ಮನುಷ್ಯನ್ ತಾನ್ ಮನುಷ್ಯನೆ ಎಂಬುದನ್ ಮಱೆತು, ಕಡುಕೊರ್ಬಿ, ಒಳ್ಪಿತರ್ಕಿಲ್ಲನ್, ಆಗಳೇ ದೇವರ್ಕಳ್ ಅವನ ಬಾೞ್ಗೆಡರೊಡ್ಡಿ ಕೆೞಗುರುಳೆ ಪೊಯ್ವರ್.

*ಏಳು, ಎಚ್ಚರವಾಗು, ಉಸಿರು ತುಂಬು—ಈ ಚಿಮ್ಮುಗಾಲದಲ್ಲಿಯೂ ನೀನೇಳದೇ ಹೋದರೆ ಎಂದೆಂದಿಗೂ ಬೀಳು ! ಬಿದ್ದಿರು ! ಓ ಕನ್ನಡ ಮಗುವೇ !

*ಐಕಮತ್ಯವೆಂದರೆ ಎಲ್ಲರೂ ಒಂದೇ ಪಡಿಯಚ್ಚಾಗಿ ಸ್ವತಂತ್ರವನ್ನು ನೀಗಿಕೊಳ್ಳಬೇಕೆಂದಲ್ಲ.

*ಒಂದು ಪಗಲ್ ಎತ್ತುವುದು, ಒಂದು ಪಗಲ್ ಉರುಳಿಪುದು ಮಾನುಷಮನ್ ಎಲ್ಲಮನ್.

*ಒಡವೆಗಳಲ್ಲಿ ಭಾಷೆ ಒಂದು ; ಅದು ಚೆನ್ನಾಗಿದ್ದಷ್ಟೂ ಭೂಷಣ.

*ಒಡೆಯ ಬಾರದ ಕೊರಗು ಮನೆಗೆ ; ಇನಿಯ ಬಾರದ ಕೊರಗು ಹೆಣ್ಗೆ; ಮಕ್ಕಳಿಲ್ಲದ ಕೊರಗು ಮುಪ್ಪಿಂಗೆ; ಕಾವರಿಲ್ಲದ ಕೊರಗು ಮಕ್ಕಳ್ಗೆ.

*ಒಲುಮೆಗಿಂತ ಗೆಲವಿಲ್ಲ; ಒಕ್ಕೊಟಕ್ಕಿಂತ ಬಲವಿಲ್ಲ.

*ಓ ಪೊಲ್ಲ ಯುದ್ಧಮೇ,
ಎಂದು ನಿಲ್ವಯ್!
ಓ ತಾಯೆ ಶಾಂತಿಯೇ
ಎಂದು ಗೆಲ್ವಯ್!

*ಕನ್ನಡತಾಯಿಗಾಗಿ ಭಿಕ್ಷೆ ಬೇಡುವ ದಾಸಯ್ಯ ನಾನು.

*ಕನ್ನಡದ ಕಾವಲು ನಾಯಿ ನಾನು. ಅದಕ್ಕೆ ಕಾವು ತಟ್ಟುವುದಾದರೆ ನಾನು ಬಗುಳುವುದುಂಟು; ಕಚ್ಚುವ ನಾಯಲ್ಲ.

*ಕನ್ನಡದ ಬೇರನ್ನು ಕೊಯ್ದು, ಕನ್ನಡ ನಾಡನ್ನು ಒಂದುಗೂಡಿಸಬಹುದೆ ?

*ಕನ್ನಡದವರ ದೃಷ್ಟಿ ವಿಶಾಲವಾಗಬೇಕು. ಬೆಳಕು, ಗಾಳಿ ಎಲ್ಲೆಲ್ಲಿಂದ ಬರುವುವೋ ಅಲ್ಲಿಂದೆಲ್ಲಾ ಅವನ್ನು ನಮ್ರತೆಯಿಂದ, ಭಕ್ತಿಯಿಂದ ಸ್ವಾಗತಿಸಿ ನಮ್ಮ ಸಂಸ್ಕೃತಿಯನ್ನೂ ತೇಜಸ್ಸನ್ನೂ ಬೆಳಸಿಕೊಳ್ಳಬೇಕು.

*ಕನ್ನಡದ ಸಾರಮಂತ್ರ: ಹೀರಿ ಹೊಮ್ಮುವುದು; ಮರಳಿ ಮರಳಿ ಪುನರುಜ್ಜೀವನ.

*ಕನ್ನಡದ ಸೇವೆಯನ್ನು ಮಾಡಿ ಧನ್ಯರಾಗಿರಿ. ಇದಕ್ಕೂ ದೊಡ್ಡ ದೊಡ್ಡ ಧ್ಯೇಯಗಳನ್ನು ದೊಡ್ಡ ದೊಡ್ಡ ಮೇಧಾವಿಗಳಿಗೂ ಜಗದುದ್ಧಾರಕರಿಗೂ ಬಿಡಿ. ನಿಮ್ಮ ನನ್ನ ಜೀವಮಾನದ ತೀರ್ಪು– ನಮ್ಮ ಕನ್ನಡ ತಾಯಿ ಸೇವೆ.

*ಕನ್ನಡ ನನಗೆ ಮುಂದು, ಉಳಿದುದು ಏನಿದ್ದರೂ ಅದರ ಹಿಂದು.

*ಕನ್ನಡ : ನಮ್ಮ ಕನ್ನಡ, ನಮ್ಮ ಹಿರಿಯರ ಕನ್ನಡ, ನಮ್ಮ ಮಕ್ಕಳ ಮೊಮ್ಮಕ್ಕಳ ಕನ್ನಡ.

*ಕನ್ನಡ ನಾಡಿಗೆ ಕನ್ನಡ ನುಡಿಗೆ ಒಮ್ಮನಸ್ಸಿನಿಂದ ಮುಡಿಪು ಕಟ್ಟೋಣ ; ಒಮ್ಮೆಯ್ಯಾಗಿ ಅವುಗಳ ಏಳಿಗೆಯಲ್ಲಿ ಏಳಿಗೆಯಾಗೋಣ.

*ಕನ್ನಡ ನಾಡಿಗೆ ಕನ್ನಡವೇ ಗತಿ. ಅನ್ಯಥಾ ಶರಣಂ ನಾಸ್ತಿ. ಸಂಸ್ಕೃತವಲ್ಲ, ಇಂಗ್ಲಿಷಲ್ಲ, ಹಿಂದಿಯಲ್ಲ, **ಕನ್ನಡ.**

*ಕನ್ನಡನಾಡಿನ ದೇಶಭಾಷೆ ಕನ್ನಡ ಎಂಬ ಆಧಾರದ ಮೇಲೆಯೇ ಕನ್ನಡನಾಡು ಮತ್ತೆ ಹುಟ್ಟಬೇಕಾಗಿದೆ.

*ಕನ್ನಡ ಮಾತೆಯ ಮೂಲಕ ಭಾರತ ಮಾತೆಯನ್ನು ಸೇವಿಸೋಣ. ಕನ್ನಡ ಮಾತೆ ಉದ್ಧಾರವಾದರೆ ಭಾರತ ಮಾತೆಯೂ ವೃದ್ಧಿಯಾಗುತ್ತಾಳೆ.

*ಕನ್ನಡವನ್ನು ನಂಬಿ; ಕನ್ನಡವನ್ನು ಕೈ ಹಿಡಿಯಿರಿ,

*ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ, ಗುರು.

*ಕನ್ನಡಿಗರಾದ ನೀವು ಯಾರಿಗೂ ತಲೆತಗ್ಗಿಸ ಬೇಕಾಗಿಲ್ಲ ; ತಲೆಯೆತ್ತಿ ನಡೆಯಬೇಕಾಗಿದೆ.

*ಕನ್ನಡಿಗರುಸಿರಾಗಿ ಕನ್ನಡಂ ಬಾಳ್ಗೆ.

*ಕರುಣಾಳು, ಬಾ, ಬೆಳಕೆ, ಮುಸುಕಿದೀ ಮಬ್ಬಿನಲಿ, ಕೈಹಿಡಿದು ನಡಸೆನ್ನನು.

*ಕರ್ಮಮ್ ಈಪರಿ ಮಱಿಗೆ ಮಱಿ ಇಕ್ಕುತಿರ್ಕ್ಕುಂ ; ಕ್ಷಮೆಯಿಂದೆ ಸಮೆಯದಿರೆ ಮಱುಕೊಳಿಸುತಿರ್ಕ್ಕುಂ.

*ಕಲಿಯುವುದೇ ನನ್ನ ಜೀವನದ ಕರೆ : ಕಲಿಯು ವುದು, ಕಲಿತದ್ದನ್ನು ತಿಳಿಯದವರಿಗೆ ಕಲಿಸುವುದು.

*ಕವಿ ನಿಜವಾಗಿಯೂ ಕವಿಯಾಗಿದ್ದರೆ ಸರಿ ; ಕಾವ್ಯ ನಿಜವಾಗಿಯೂ ಕಾವ್ಯಜಾತಿಗೆ ಸೇರಿದ್ದರೆ ಸಾಕು.

*ಕವಿಯಲ್ಲದವನ ಕರ್ಮ ಕಾವ್ಯವಾಗಲಾರದು.

*ಕವಿಯ ಸೃಷ್ಟಿಕಾರ್ಯಕ್ಕೆ ಭಾಷೆಯೇ ಸಾಮಗ್ರಿ ; ಆದರೆ ಅದರಿಂದ ಸ್ಪಷ್ಟವಾದ ಸುಂದರವಾದ ಜಗತ್ತನ್ನು ನಿರ್ಮಾಣ ಮಾಡುವವರೆಗೂ, ನಿಮ್ಮ ಮಾತೆಲ್ಲ ಮಂಜಿನ ಮಬ್ಬೇ.

*ಕಾಲಚಕ್ರಂ ಪೊರಳೆ, ಮುಚ್ಚಿದುದು ಬೆಳಕಕ್ಕುಂ, ಇರ್ದುದಿಲ್ಲಕ್ಕುಂ.

*ಕಾಳಗದ ಪುಲಿ ತಾನ್, ಕಾಳಗದ ಪುಲಿಗಳನ್ ಪೋರ್ಕಳದೆ ಕಳಿಯನ್, ಸಾವಿಗೀಯನ್.

*ಕೆಟ್ಟವಮಾತಾಡದಿರು, ಮರ್ದಲ್ತು ಪೊಲೆಗೆ ಪೊಲೆ.

*ಕೆಳೆಯುನೆಂಬನ್ ನುಡಿದು ಕೆಳೆಯಲ್ಲದೊರ್ವಾತನ್ ಕೆಳೆಯುನಿರಲಕ್ಕುವೋ ?

*ಕೆಳೆಯಂಗೆ ಸೋಲ್ವುದೆ ಜಯಂ ; ಕ್ಷಮೆಯೆ ತಾನ್ತ ಜಯಂ ; ಕ್ರೋಧಮನ್ ತುಳಿದಿಟ್ಟು, ಬಲ್ಪಿಡಿದು ಧರ್ಮಮನ್, ಬಗೆಯೊಡನೆ ಪೋರಾಡುವುದೆ ಜಯಂ.

*ಕೇಡಡಿಸಿದಾಗಳ್ ಕೇಡಿಂಗೆ ಕೇಡನೇ ಕೂಡಿಸುವುದೆಮ್ಮರಿವು ; ಅಂತಾಗಬಾರದು.

*ಕೇಡಿಗೋಡಲೆಳಸಲೊಬ್ಬ, ದೈವವವನ ತಳ್ವುದು.

*ಕೇಳಿದುದನ್ನು ಕೊಡುವವರ ಬಳಿ ನಮ್ಮ ಕೆಲಸವೇನಂ ? ಮೇಲಿಂದ ಮೇಲೆ ಕೇಳುವುದು ತಾನೆ.

*ಕೈಗೆ ಬಾರದ ಗುರಿಗೆ ಕಟ್ಟೊಲ್ಮೆಯುನ್ ತೆತ್ತು, ಕಳೆಯುಬಾರದು ದೇವರಿತ್ತೊಂದು ಭಾಗ್ಯವನ್.

*ಕೊನೆಗೆ ನಿಲ್ಲುವುದು ಅಭಿಮಾನವಲ್ಲ, ಸತ್ಯ.

*ಗುಣವಿದ್ದಲ್ಲಿ ಗಾತ್ರವನ್ನು ಯಾರು ನೋಡುವರು? ವೀರ್ಯವಿದ್ದಲ್ಲಿ ವೇಷ ಭಾಷೆಗಳನ್ನು ಯಾರು ಕೇಳುವರು ?

*'ಗುರು' ದೊಡ್ಡ ಹೆಸರು : ನಾವು ಸಂಬಳದ ಉಪಾಧ್ಯಾಯರು.

*ಚಿನ್ನದೊಡನೆ ಕೂಡುವುದು ಚಿನ್ನ - ಹಿತ್ತಾಳೆಯಲ್ಲ: ಪಾದರಸದೊಡನೆ ಹೊಂದಿಕೊಳ್ಳುವುದು ಪಾದರಸ, ಕಸವಲ್ಲ. ತೂಗಬೇಕು, ಸೋಸಬೇಕು, ಒರೆಗಲ್ಲಿಗೆ ತೀಡಬೇಕು, ನೋಡಬೇಕು.

*ಜನರಿಗೆ ತಿಳಿಯದ ಭಾಷೆಯಲ್ಲಿ ಬರೆಯುವುದರಲ್ಲಿ ಯಾವ ಬುದ್ಧಿವಂತಿಕೆಯೂ ಇಲ್ಲ.

*ಜನವಾಣಿ ಬೇರು ; ಕವಿವಾಣಿ ಹೂವು.

*ಜೇನುಹುಳು ಯಾವ ಹೂವಿನ ಮಕರಂದವನ್ನು ತಂದರೂ ಕೊನೆಗೆ ಎಲ್ಲಾ ತನ್ನ ಜೇನುತುಪ್ಪವನ್ನಾಗಿಯೇ ಹೇಗೆ ಮಾಡಿಕೊಳ್ಳುವುದೋ ಹಾಗೆ ಎಲ್ಲವೂ ಕನ್ನಡವೇ ಆಗಿ ಹೋದರೆ, ಆಗ ಹೊರಗಿನದು ಎಲ್ಲಿ ಬಂತು ?

*ತಕ್ಕನ್ ತಕ್ಕವೊಲ್ ಬಾಳ್ವುಪನ್, ತಕ್ಕವೊಲ್ ಸತ್ತುಪನ್.

*ತಕ್ಕನ್ ನಲಿವಸ್ ಒರ್ಕಡೆ ಪಡೆದು ಮಱೆದಪನೆ? ಮಱೆಯಲ್ಕೆ ತಕ್ಕನ್ ಎಂತಪ್ಪನ್ ?

*ತಾಯುಳಿಯೆ ನಾನುಳಿದೆ. ತಾಯಳಿಯೆ ನಾನಳಿದೆ ಮನೆ ಕಾಯಿ, ತುರು ಕಾಯಿ, ನಾಡಗಡಿ ಗುಡಿ ಕಾಯಿ. ಕಾಯಲಾರೆಯ, ಸಾಯಿ.

*ತೇಲಾಡು, ಮೇಲಾಡು, ಓಲಾಡು ಬಾವುಟ !
ಚೆಲುವಾಗು, ಗೆಲುವಾಗು, ಬಲವಾಗು ಬಾವುಟ !

*ದುಃಖಮುಂ ಕ್ರೋಧಮುಂ ಮಾಡುವುದು ಸಯ್ತಲ್ತು.

*ದೇವತೆಯ ಬಲವ್ ಇರ್ದೊಡಯ್ಯ, ಪೇಡಿಯುಂ ಗೆಲ್ದಪನ್.

*ದೇವರ್ಕಳೆಡರ ಕೊಡೆ, ಹೊರಬೇಕು ತಾಳ್ಮೆಯಲಿ ಮರ್ತ್ಯರಾದವರು.

*ದೈವಂ ತಪ್ಪಾಗಿ ನಡಸುವೊಡೆ, ಕಲಿ ಎಡಪುವನ್, ಪೇಡಿ ಬರ್ದುಕುವನ್, ನಗುವನ್.

*ದೈವದೊಳ್ ಸೊರ್ಕುನುಡಿ ನುಡಿಯದಿರ್.

*ದ್ವೇಷವಮ್ ಎನಿತಿರ್ದೊಡಂ, ತುಳಿಯದಿರು ಧರ್ಮಮನ್.

*ಧರ್ಮವನ್ನು ನಂಬಬೇಕು, ತಿಳಿಯಬೇಕು. ನಡೆಯಬೇಕು ; ಧರ್ಮವನ್ನು ಹೀಗೆ ನಂಬಿ, ತಿಳಿದು ನಡೆದರೆ ನಾವು ಬದುಕುವೆವು. ಹಾಗಿಲ್ಲದೆ, ನಂಬಿಯೂ ತಿಳಿಯದೆ, ತಿಳಿದೂ ನಡೆಯದೆ, ನಡೆದರೂ ಡಂಭಕ್ಕಾಗಿ ನಡೆದರೆ ಕೆಡುವೆವು.

*ನನಗೆ ಬೆಳಕೇ ಬೇಸರಲ್ಲ,
ಒಲುಮೆಯಳಿದೀ ನೆಲದಲಿ !

*ನಮ್ಮ ಅದೃಷ್ಟ ನಮ್ಮ ಕೈಯಲ್ಲೇ ಅಡಗಿದೆ.

*ನಮ್ಮ ಮಾತೇನೂ ನೆನ್ನೆ ಮೊನ್ನೆಯ ಕಾಡು ಮಾತಲ್ಲ ; ನಮ್ಮ ಕಾವ್ಯಮಾಲೆ ಓದು ಬರಹ ಬರದ ಒಡ್ಡರು ಹೇಳುವ ಕುರುಕು ಪದವೂ ಅಲ್ಲ.

*ನಮ್ಮ ಮೈಯಲ್ಲಿ ಹುಟ್ಟಿದ ರೋಗ ನಮ್ಮದಾದರೂ ಕಳೆಯತಕ್ಕ ವಿಷ ; ಹೊರಗಿನ ಕಾಡಿನಿಂದ ತಂದ ಮೂಲಿಕೆ, ಹೊರಗಿನದಾದರೂ ರಕ್ತಗತವಾಗಬೇಕಾದ ಅಮೃತ.

*ನಮ್ಮ ಹೆಣ್ಣುಮಕ್ಕಳು ಕನ್ನಡಕ್ಕಾಗಿ ಕೊಂಚ ಕರುಳನ್ನು ಮರುಗಿಸಿಕೊಂಡು, ಕನ್ನಡ ತಾಯಿಯ ಸೇವೆಗಾಗಿ ಕೊಂಚ ಮನಸ್ಸು ಮಾಡಿದರೆ ಕನ್ನಡ ನಾಡಿನ ಮತ್ತು ನುಡಿಯ ಭವಿಷ್ಯಕ್ಕೆ ಯಾವ ಭಯವೂ ಇಲ್ಲ.

*ನುಡಿಯಿಸಲ್ ಬಲ್ಲಂಗೆ ಬಿಲ್ಲೊಂದು, ಪೇಣ್ ಬೀಣೆಯೊಂದು.

*ನೂರು ದೋಷಗಳಿದ್ದರೂ ಜೀವವಿದ್ದರೆ ಕಾವ್ಯ ಕಾವ್ಯವೇ ; ಒಂದು ತಪ್ಪಿಲ್ಲದಿದ್ದರೂ ಜೀವವಿಲ್ಲದ ಕಾವ್ಯ ಕಾವ್ಯವೇ ಅಲ್ಲ.

*ಪಗೆವನವನ್ ಒರ್ಮೆ ಕೆಳೆಯನಪ್ಪನ್ ; ಕೆಳೆಯೆ ಪಗೆಯಪ್ಪನ್ ; ಅದಱಿಂದೆ ಕಟ್ಟೊಲ್ಮೆ ತಗದು. ಕಡು ಪಗೆಯುಮ್ ಆಗದು.

*ಪಾಪಕ್ಕೆ ಶಿಕ್ಷೆ ವಿಧಿ : ಕರುಣಕ್ಕೆ, ಸಹಾನುಭೂತಿಗೆ ಪಾಪಿಯೂ ಮುದ್ದು. ಲೋಕ ಜರೆಯುವುದೇ, ತಬ್ಬುಗೆ.

*ಪಿಂದೆ ಪಗೆ, ಮುಂದೆ ಕೆಳೆ.

*ಪಿಡಿಯಲ್ಕೆವೇಟ್ಕುಮೇ ಸಾಯಲ್ ಓಡುವನನ್ !

*ಪುಣ್ ಕೊಯ್ಯಲಿರ್ಪಂದು ಮಂತ್ರಮನ್ ಮಿನುಕುವನ್ ಅವನ್ ಮರುಳ್ ವೈದ್ಯನ್.

*ಪುಣ್ಯಪುರಮಂ ಕಟ್ಟಿ ಪುರುಷನೊಳ ಅಗ್ನಿಯಂ ಕಾವವರೆ ದೇವರ್.

*ಪುನರುಜ್ಜೀವನಕ್ಕೆ, ಸ್ವಾತಂತ್ರ್ಯಕ್ಕೆ, ಹೊಸ ಆತ್ಮಕ್ಕೆ ಪ್ರಳಯವೂ ಬೇಕು, ಸೃಷ್ಟಿಯೂ ಬೇಕು. ಅದಕ್ಕಾಗಿ ಬಿಡುವುದೂ ಉಂಟು ; ಇಡುವುದೂ ಉಂಟು, ಸೇರಿಸುವುದೂ ಉಂಟು.

*ಪುರಾತನರ ಜ್ಞಾನವನ್ನೂ ನೂತನರ ಜ್ಞಾನವನ್ನೂ ಹೊಂದಿಸಿ, ಇಬ್ಬರ ಅವಿವೇಕವನ್ನೂ ದೂರ ಮಾಡಿ, ಬುದ್ಧಿಯನ್ನು ಪ್ರೇರಿಸುವ ವಿಶಾಲ ದೃಷ್ಟಿಯನ್ನು ಪಡೆಯುವುದು ಎಲ್ಲರ ಪರಮ ಕರ್ತವ್ಯವಾಗಿದೆ.

*ಪೂರ್ವ ಪಶ್ಚಿಮ ಎರಡು ಬೇರುಗಳೂ ಹೆಣೆದು ಕೊಂಡು ಒಂದು ತಾಯಿಬೇರಾಗಿ ಭಾರತ ಮಹಾವೃಕ್ಷ ಆಕಾಶಕ್ಕೆ ಚಿಮ್ಮಲಿ.

*[ಪ್ರಜಾಪ್ರಭುತ್ವ] ಅದು ಬರಿಯ ಬಲವಲ್ಲ; ಬರಿಯ ಬಹುಮತವೇ ಅಲ್ಲ; ಹಕ್ಕುಗಳಿಗಿಂತಲೂ ಹೆಚ್ಚಾಗಿ ಜವಾಬ್ದಾರಿಯನ್ನು ಬಯಸುವ ಬಲ್ಲಾಳುಗಳ ಬಾಳಿಕೆಯ ಆಳಿಕೆ.

*ಪ್ರತಿಯೊಬ್ಬ ಕನ್ನಡಿಗನೂ ಕನ್ನಡಮ್ಮನ ಪೂಜಾರಿ ಯಾಗಬೇಕು:

*ಬರೆಯುವ ಭಾಷೆಗೆ ಆಡುವ ಭಾಷೆಯೇ ಜನ್ಮ ಸ್ಥಾನ.

*ಬಾವಿಯಲ್ಲಿ ಸೀನೀರು ಸಿಕ್ಕುತ್ತಿರುವಾಗ ಕಡಲಲ್ಲಿ ಹೋಗಿ ಉಪ್ಪು ನೀರು ಕುಡಿಯತಕ್ಕದ್ದಲ್ಲ.

*ಬಾಳ್ ಕನ್ನಡ ತಾಯ್, ಏಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್, ಕನ್ನಡಿಗರೊಡತಿ ಓ ರಾಜೇಶ್ವರೀ!

*ಬಾಳದು ಆಳಿಲ್ಲದ ಸಿರಿ.

*ಬೆಳೆಯೇನೋ ಬೇಕಾದ ಹಾಗಿದೆ; ಕುಯಲು ಗಾರರು ಕಡಿಮೆ.

*ಬೊಜ್ಜು ಬಲವಲ್ಲ.

*ಭಾಷಾಂತರ ಕೀಳು ಕೆಲಸವಲ್ಲ; ಸುಲಭವಾದ ಕೆಲಸವೂ ಅಲ್ಲ; ನಿರರ್ಥಕವಾದ ಕೆಲಸವೂ ಅಲ್ಲ.

*ಭಾಷೆಯನ್ನು ಸುಲಭ ಮಾಡುತ್ತೇನೆಂದು ಅಬದ್ಧ ಮಾಡಬಾರದು.

*ಮನಸ್ಸು ಕಲ್ಲಾಗಿ ನಿಲ್ಲದೆ ತೆರೆದುಕೊಂಡು ಬೆಳೆಯುತ್ತಿರಬೇಕು ; ಏಕಾಂತ ದೃಷ್ಟಿಯಲ್ಲಿ ನಿಲ್ಲಬಾರದು.

*ಮನುಜಂಗೆ ಸ್ನೇಹವೆಂಬುದು ಪುಸಿಯು ನಚ್ಚು.

*ಮನುಜನಿಗೆ ಮಗು ತಂದೆ.

*ಮನುಷ್ಯನು ತನ್ನ ಸರ್ವಸ್ವವನ್ನೂ ಯಾವುದಕ್ಕೆ ಒಪ್ಪಿಸಲು ಸಿದ್ಧನಾಗಿರುವನೋ ಅವರ ಕುರುಹು– 'ಬಾವುಟ'.

*ಮನ್ಮಥನೂ ಎಳಮೆಯೂ ಕವಿತೆಗೆ ಹೊರಗಲ್ಲ, ಖಂಡಿತ ಅಲ್ಲ.

*ಮಹಾಕವಿಗಳ ಕೈಯಲ್ಲಿ ಆಗುವುದೇ ಹೀಗೆ– ಪಾಪಿಗಳಲ್ಲಿ ಗುಣಾನ್ವೇಷಣ, ಕನಿಕರ, ದಯೆ.

*ಮಿತಿಯಱಿದು ನೆಗೞ್ವರ್ಗೆ ದೇವರ್ಕಳ್ ಒಸೆದ ಪರ್–ಮುಱಿದಪರ್ ಮಿಕ್ಕರನ್.

*ಯೌವನವು ಸುಮ್ಮಾನ, ಮುಪ್ಪು ಮಿಡುಕಾಟ, ಯೌವನವು ಸಿರಿಸುಗ್ಗಿ, ಮುಪ್ಪು ಬರಿಪಾಗಿ.

*ರುದ್ರನ್ ಒಲ್ದೊಡೆ ಉಱಿವು; ಒಲ್ಲದೊಡೆ ಒಡನೞಿವು.

*ರುದ್ರ ನಾಟಕದ ಭಯ ಮಕ್ಕಳ ಭಯ; ಅವು ಕತ್ತಲೆಗೆ ಹೆದರಿದಂತೆ–ಮೇಲೆ ಮಿನುಗುವುವು ಧ್ರುವ ತಾರೆಗಳು; ಕತ್ತಲೆಯಲ್ಲೇ ಅವನ್ನು ದೃಷ್ಟಿಸಬೇಕು.

*ರೈಲನ್ನು ರೈಲೆಂದೇ ಕರೆಯುವುದು ಉತ್ತಮ; ಹೊಗೆಬಂಡಿ, ಹೊಗೆಗಾಡಿ ಎನ್ನುವುದು ಮಧ್ಯಮ; ಧೂಮಶಕಟವೆನ್ನುವುದು ಅಧಮ.

*ಲೋಕವೆಲ್ಲಾ ಬಗ್ಗುವುದು ಶ್ರೇಷ್ಠವಾದ ಬುದ್ಧಿಗೆ.

*ವಿಧಿಯಿಂದೆಯುಂ ನರರ್ಗೆ ಕ್ರೂರಂ ಬೇಱಿಲ್ಲ.

*[ಶಾಸಕರು] ಜನತೆಯ ಕಿನೆ; ಆಡಳಿತದ ಮೊನೆ.

*ಸಂಸ್ಕೃತದ ಮೇಲಿದ್ದ ಮಮತೆಯಲ್ಲಿ ಕನ್ನಡದ ಶಕ್ತಿಗೆ ಮೀರಿ ಅದು ಹೊರಲಾರದಷ್ಟು ಹೊರೆ ಅಲ್ಲಿಂದ ಬಂದಿದ್ದರೂ ಬಂದಿರಬಹುದು-ಬಂದಿದೆ; ಆ ಹೆಚ್ಚು ಹೊರೆಯನ್ನು ಇಳಿಸಿ ಕನ್ನಡವನ್ನು ತಿಳಿಮಾಡಬೇಕೆಂಬುದು ನನ್ನ ಮತ.

*ಸತ್ತರ್ಗೆ ಸಿರಿಯು ಸುಖವಿಲ್ಲ!

*ಸತ್ತರೊಳ್ ಪುರುಡಿಸುವ ಶೂರರ್ ಇರ್ಪರ್ ಕೆಲರ್.

*ಸರ್ವಜೀವಂಗಳುಂ ಮುಕ್ತಿಯುಂ ಕಾಣ್ಗೆ;
ದೇವರೊಳ್ ಪಗೆವವರ ಕಾಳಗಂ ಮಾಣ್ಗೆ
ಸಾವುದೆಲ್ಲಾ ಸತ್ತು, ಬಾನಾಳ್ಕೆ ಪೂಣ್ಗೆ.

*ಸರ್ವರ ಕರುಣದ ಶಿಶು ನಾನು, ನಾಡ ತೊತ್ತು.

*ಸಾಧಾರಣರಾದ ನನ್ನಂತಹವರಿಗೆ ಧ್ಯೇಯವೇ ಸಮಾಧಾನ, ತಣಿವು.

*ಸಾಮ್ರಾಜ್ಯವ ಕಾವರಾರು ?
ಧರ್ಮವೇ.
ದೈವ ಕಾವ ಧರ್ಮವೇ.

*ಸಾವನೊದೆದು ಬೆಳಗಿ, ಕನ್ನಡದ ಮಕ್ಕಳ್ಗೆ ಕನ್ನಡದ ಪಾಲೆರೆದು, ಬಾಳ್ಗೆ ಬಾಳ್ ಪೊಯ್ದು, ಬಾಳ್ವವರು ಮೆರೆವವರು.

*ಸಾಹಿತ್ಯವೆಲ್ಲ ಮಿಠಾಯಿಯಲ್ಲ ; ಕಹಿ ಔಷಧವೂ ಉಂಟು.

*ಸುಖದೊಳ್ ನಗದಾತಂ ಏನನಾಡದೆ ಬಿಡುವನ್?

*ಸ್ವತಂತ್ರವೆಂದರೆ ಸ್ವೇಚ್ಛೆಯಲ್ಲ.

*ಹಳಗನ್ನಡಕ್ಕೆ ಹೆದರಬೇಡಿ...ಕೊಂಚ ಅಭ್ಯಾಸ ವಾದರೆ ದೊಡ್ಡ ಬೊಕ್ಕಸಕ್ಕೆ ನಿಮಗೆ ಬೀಗದ ಕೈ ಅದು.

*ಹಿಂದೆ ಯುರೋಪಿನಲ್ಲಿ ರಿನೇಸಾನ್ಸ್ ಎಂಬ ಸಾಹಿತ್ಯದ ಪುನರ್ಜನ್ಮವುಂಟಾದಾಗ ಒಬ್ಬ ಮಹಾ ಪಂಡಿತನು–''ನಾವು ಸತ್ತವರನ್ನು ಎಬ್ಬಿಸುವುದಕ್ಕೆ ಹೋಗು ತ್ತೇವೆ'' ಎಂದು ಘೋಷಿಸಿದನು. ನಾವು, ಕನ್ನಡಿಗರು. ಇಂದು ಸತ್ತವರನ್ನು ಎಬ್ಬಿಸುವುದೇ ಅಲ್ಲ ; ಬದುಕಿರುವ ವರನ್ನೂ ಎಚ್ಚರಗೊಳಿಸುವುದಕ್ಕೆ ಹೊರಟಿರುವೆವು.

*ಹೇಳದಿರು ಹೋರಾಡಿ ಫಲವಿಲ್ಲವೆಂದು,
ತೋಳ ದಣಿಸಿದೆ ಬರಿದೆ ಘಾಸಿಯಾಯ್ತೆಂದು,

*ಹೊತ್ತು ಹೋಗುವುದೆನಗೆ ಸತ್ತವರ ಸಂಗದಲಿ
ಬಳಸಿನಲಿ ಬಂದಿಹರ ಕಾಣುತಿಹೆನು.

ಸಿರಿಗನ್ನಡಂ ಗೆಲ್ಗೆ, ಬಾಳ್ಗೆ ; ಕನ್ನಡದ ತಾಯ್ ಗೆಲ್ಗೆ, ಬಾಳ್ಗೆ.

ಬಿ. ಎಂ. ಶ್ರೀ. ಸ್ಮಾರಕ ಪ್ರತಿಷ್ಠಾನದ ಪ್ರಕಟಣೆಗಳು

1.	ಕೀರ್ತನ ಕುಸುಮಾಂಜಲಿ	10—00
2.	ಮಹಿಹ (ಫ. ಗು. ಹಳಕಟ್ಟಿ ಸಂಸ್ಮರಣ ಸಂಪುಟ)	50—00
3.	ಬೇಂದ್ರೆ ಸ್ಮೃತಿ	5—00
4.	ಸರ್ವಜ್ಞ ವಚನಗಳು	15—00
5.	ಸೂತ ಭಾರತ	15—00
6.	ಧ್ರುವ ಚರಿತ್ರೆ	15—00
7.	ಹಸ್ತಪ್ರತಿಶಾಸ್ತ್ರ	15—00
8.	ಶ್ರೀಕೃಷ್ಣದೇವರಾಯನ ದಿನಚರಿ	10—00
9.	ಮೂರು ದತ್ತಿ ಉಪನ್ಯಾಸಗಳು	10—00
10.	ಲೋಚನ (ಷಾಣ್ಮಾಸಿಕ ವಿದ್ವತ್ ಪತ್ರಿಕೆ) ವಾರ್ಷಿಕ ಚಂದಾ	6—00

ಶ್ರೀಸ್ತುತಿ

"ಶ್ರೀಕಂಠಯ್ಯನವರಂಥವರು ದೇಶಕ್ಕೇ ಭೂಷಣ, ದೊಡ್ಡ ಭಾಗ್ಯ."

—ಚ. ವಾಸುದೇವಯ್ಯ

"ಕನ್ನಡಕೆ ಕಣ್ವಮುನಿ" —ಮಾಸ್ತಿ ವೆಂಕಟೇಶ ಅಯ್ಯಂಗಾರ್

"ಶ್ರೀಕಂಠಯ್ಯನವರ 'ಕಂಠಶ್ರೀ' ಇತರರಿಗಿಲ್ಲ" —ಆಲೂರ ವೆಂಕಟರಾಯ

"ಶ್ರೀಯವರು ಮಾರ್ಗದರ್ಶಿಗಳು, ಮಾರ್ಗಕಾರರು" —ದ. ರಾ. ಬೇಂದ್ರೆ

"ಕನ್ನಡ ಸಾಹಿತ್ಯ ನವೋದಯಕ್ಕೆ ನಾಂದೀಸ್ವರೂಪರಾದವರು" —ಕುವೆಂಪು

"ಶ್ರೀಯವರು ವಾಕ್ ಶ್ರೀಯುತರು, ವಾಕ್ಕೋವಿದರು, ವಾಗ್ವೈಭವ ಶಾಲಿಗಳು"

—ಎಸ್. ವಿ. ರಂಗಣ್ಣ

"ಅವರು ತೋರಿಸಿದ್ದೇ ಒಳ್ಳೆಯ ದಾರಿ." —ಡಿ. ವಿ. ಗುಂಡಪ್ಪ

"ಶ್ರೀಯವರು ಕನ್ನಡ ಮಾತೆಗೆ ಒಂದು ತೇಜಸ್ಸನ್ನೂ ಓಜಸ್ಸನ್ನೂ ಕೊಟ್ಟರು."

—ಗೊರೂರು ರಾಮಸ್ವಾಮಿ ಅಯ್ಯಂಗಾರ್

"ಕನ್ನಡದ 'ಹುಚ್ಚು' ಅವರಿಗೆ ಹಿಡಿದಿರುವಷ್ಟು ಹಿಂದೆ ಮತ್ತೆ ಯಾರಿಗೂ ಹಿಡಿದಿರಲಿಲ್ಲ."

—ಬೆಳ್ಳಾವೆ ವೆಂಕಟನಾರಣಪ್ಪ

"ಹುಟ್ಟಿದೊಡನೆ ಮಕುಟರತ್ನದಂತೆ ಕನ್ನಡದಲ್ಲಿ ಹೊಳೆಯ ತೊಡಗಿದ ಕೆಲವೇ ಕೃತಿಗಳಲ್ಲಿ 'ಇಂಗ್ಲಿಷ್ ಗೀತಗಳೂ' ಒಂದು."

—ವಿ. ಕೃ. ಗೋಕಾಕ